ಸೇರಿಸಲಾಗಿದೆ. ಈ ಯೋಜನೆಯು ಮಂಜೂರಾತಿಗಾಗಿ ಸರ್ಕಾರದ ಪರಿಶೀಲನೆಯಲ್ಲಿದೆ. ಮಂಜೂರಾತಿ ನೀಡಿದ ನಂತರ ಕಾಮಗಾರಿಯನ್ನು ಕೈಗೆತ್ತಿಕೊಳ್ಳಲಾಗುವುದು.

1576 (2022) ಶ್ರೀ ಹಾಲಪ್ಪ. ಹೆಚ್ (ಹೊಸನಗರ) ಮಾನ್ಯ ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ. ಶಿವಮೊಗ್ಗ ಜಿಲ್ಲೆಯಲ್ಲಿರುವ ವಿವಿಧ ನ್ಯಾಯಾಲಯಗಳಿಗೆ ಸ್ವಂತ ಕಟ್ಟಡ ಇದೆಯೇ;

ಆ. ಸ್ವಂತ ಕಟ್ಟಡವಿಲ್ಲದೆ ಬೇರೆ ಬೇರೆ ಕಟ್ಟಡಗಳಲ್ಲಿ ನಡೆಯುತ್ತಿರುವ ನ್ಯಾಯಾಲಯಗಳಾವುವು (ತಾಲ್ಲೂಕುವಾರ ವಿವರ ನೀಡುವುದು)

ಇ. ನ್ಯಾಯಾಲಯದ ಹೊಸ ಕಟ್ಟಡಕ್ಕಾಗಿ ಪ್ರತ್ಯೇಕ ಸ್ಥಳವನ್ನು ಗುರುತಿಸಲಾಗಿದೆಯೇ?

ಈ. ಹಾಗಿದ್ದಲ್ಲಿ ಈಗ ಬಗ್ಗೆ ಸರ್ಕಾರ ಏನು ಕ್ರಮ ಕೈಗೊಂಡಿದೆ ?

ಶ್ರೀ ಹೆಚ್.ಕೆ.ಪಾಟೀಲ್ (ಮಾನ್ಯ ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು) :

ಅ. ಶಿವಮೊಗ್ಗ ಜಿಲ್ಲೆಯಲ್ಲಿ ಸೊರಬ ಮತ್ತು ಹೊಸನಗರ ನ್ಯಾಯಾಲಯಗಳನ್ನು ಹೊರತು ಪಡಿಸಿ ಉಳಿದ ಎಲ್ಲಾ ನ್ಯಾಯಾಲಯಗಳು ಸ್ವಂತ ಕಟ್ಟಡದಲ್ಲಿ ಕಾರ್ಯನಿರ್ವಹಿಸುತ್ತಿವೆ.

ಆ. ಸೊರಬ ಮತ್ತು ಹೊಸನಗರದಲ್ಲಿನ ಸಿವಿಲ್ ನ್ಯಾಯಾದೀಶರು (ಕಿ.ವಿ) ಮತ್ತು ಜೆ ಎಂಎಫ್ ಸಿ ನ್ಯಾಯಾಲಯಗಳು ಬಾಡಿಗೆ ಕಟ್ಟಡಗಳಲ್ಲಿ ಕಾರ್ಯನಿರ್ವಹಿಸುತ್ತಿವೆ.

ಇ. ಸೊರಬದಲ್ಲಿ ನ್ಯಾಯಾಲಯದ ಸ್ವಂತ ಕಟ್ಟಡ ನಿರ್ಮಾಣವಾಗುತ್ತಿದೆ. ಹೊಸನಗರ ನ್ಯಾಯಾಲಯ ಕಟ್ಟಡ ನಿರ್ಮಿಸಲು 2.10 ಎಕರೆ ಜಮೀನನ್ನು ಹೊಂದಲಾಗಿದೆ.

ಈ. ಹೊಸನಗರದಲ್ಲಿ ನ್ಯಾಯಾಲಯ ಕಟ್ಟಡ ನಿರ್ಮಿಸುವ ಕುರಿತು ಕ್ರಮ ಕೈಗೊಳ್ಳಲಾಗುತ್ತಿದೆ.

1577(2023) ಶ್ರೀ ಹಾಲಪ್ಪ. ಹೆಚ್. (ಹೊಸನಗರ) ಮಾನ್ಯ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ;

ಅ. ಶಿವಮೊಗ್ಗ ಜಿಲ್ಲೆಯಲ್ಲಿ ಎಷ್ಟು ಪೊಲೀಸ್ ಠಾಣೆಗಳಿವೆ, ಪುರುಷ ಪೋಲಿಸ್ ಕಾನ್ಸ್ಟೇಬಲ್‌ಗಳ, ಹಾಗೂ ಮಹಿಳಾ ಕಾನ್ಸ್‌ಟೇಬಲ್‌ಗಳ ಸಬ್ ಇನ್ಸ್‌ಪೆಕ್ಟರುಗಳ, ಸಂಖ್ಯೆ ಎಷ್ಟು ;

ಆ. ಸಬ್ ಇನ್ಸ್‌ಪೆಕ್ಟರ್ ಮತ್ತು ಕಾನ್ಸ್‌ಟೇಬಲ್‌ಗಳ ಕೊರತೆ ಇದೆಯೇ :

ಇ. ಕೊರತೆಯನ್ನು ತುಂಬಲು ಸರ್ಕಾರ ಕೈಗೊಂಡ ಕ್ರಮವೇನು ;

ಈ. ಜಿಲ್ಲೆಯಲ್ಲಿ 2000ದಿಂದ 2004ನೇ ಸಾಲಿನವರೆಗೆ ಒಟ್ಟು ಎಷ್ಟು ದೌರ್ಜನ್ಯ ಪ್ರಕರಣಗಳು ನೊಂದಾಯಿಸಲಾಗಿದೆ ; ಇತ್ಯರ್ಥವಾದ ಪ್ರಕರಣಗಳೆಷ್ಟು ?

ಶ್ರೀ ಧರಂಸಿಂಗ್ (ಮುಖ್ಯ ಮಂತ್ರಿಗಳು) :

ಅ. ಶಿವಮೊಗ್ಗ ಜಿಲ್ಲೆಯಲ್ಲಿ ಒಟ್ಟು 25 ಪೊಲೀಸ್ ಠಾಣೆಗಳಿವೆ. ಜಿಲ್ಲೆಯ ಸಿಬ್ಬಂದಿ ಬಲ ಇಂತಿದೆ.

ಸಿಬ್ಬಂದಿ ವಿವರ	ಪಿಎಸ್‌ಐ	ಎಎಸ್‌ಐ	ಸಿಹೆಚ್‌ಸಿ	ಸಿಪಿಸಿ	ಒಟ್ಟು
ಪುರುಷ	41	59	268	651	1019